ಸಮಗ್ರ ಅರಣ್ಯ ಸಂರಕ್ಷಣೆ

2056(2770); ಶ್ರೀ ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕಳೆದ ಮೂರು ವರ್ಷದಲ್ಲಿ ಸಮಗ್ರ ಅರಣ್ಯ ರಕ್ಷಣಾ ಯೋಜನೆಯಡಿ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳೇನು; (ವಿವರ ನೀಡುವುದು)

ಆ) ಈ ಕಾರ್ಯಕ್ರಮಗಳಿಗೆ ಸರ್ಕಾರ ಮಾಡಿದ ವೆಚ್ಚ ಎಷ್ಟು; ಅದರಿಂದಾದ ಪ್ರಯೋಜನಗಳೇನು;

ಇ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶ ಎಷ್ಟು; ಇವುಗಳ ಒಟ್ಟು ವಿಸ್ತೀರ್ಣದ ವಿವರ ನೀಡುವುದು;

ಈ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳು ಎಷ್ಟು; ಯಾವ ಭಾಗದ ವ್ಯಾಪ್ತಿಯಲ್ಲಿ ಹೆಚ್ಚು ಅರಣ್ಯ ಪ್ರದೇಶ ಇದೆ (ವಿಸ್ತೀರ್ಣದ ವಿವರ ನೀಡುವುದು);

ಉ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯ ಅರಣ್ಯದಲ್ಲಿರುವ ಬೆಲೆ ಬಾಳುವ ಮರಗಳು ಯಾವುವು; ಅವುಗಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳ ವಿವರ ಒದಗಿಸುವುದು;

ಊ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶ ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳು ಎಷ್ಟಿವೆ; ಅವುಗಳ ತೆರವಿಗೆ ಕೈಗೊಂಡಿರುವ ಕ್ರಮ ಏನು; ಎಷ್ಟು ಜನರ ವಿರುದ್ಧ ದೂರು ದಾಖಲಾಗಿದೆ?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸಮಗ್ರ ಅರಣ್ಯ ರಕ್ಷಣಾ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರ ಹಾಗೂ ಅದಕ್ಕೆ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

ಆ) ಈ ಕಾರ್ಯಕ್ರಮಗಳಿಗೆ ಸರ್ಕಾರ ಮಾಡಿದ ವೆಚ್ಚದ ವಿವರಗಳನ್ನು ಮೇಲಿನ ಪ್ರಶ್ನೆಗೆ ನೀಡಲಾದ ಉತ್ತರದಲ್ಲಿ ಒದಗಿಸಲಾಗಿದೆ. ಮುಂದುವರೆದು ಈ ಕಾರ್ಯಕ್ರಮಗಳಿಂದ ಆದ ಪ್ರಯೋಜನಗಳು ಈ ಕೆಳಕಂಡಂತಿವೆ:

1) ಬೆಂಕಿಯಿಂದ ಅರಣ್ಯ ನಾಶವಾಗುವುದನ್ನು ತಪ್ಪಿಸುವುದು.

2) ಅರಣ್ಯದ ಅಂಚಿನಲ್ಲಿರುವ ಸಾರ್ವಜನಿಕರಿಗೆ, ಅರಣ್ಯಕ್ಕೆ ಬೆಂಕಿ ಬೀಳಬಾರದು ಹಾಗೂ ಬೆಂಕಿ ಬಿದ್ದಾಗ ಕೂಡಲೇ ಅದನ್ನು ಆರಿಸುವ ಬಗ್ಗೆ ಅರಿವು ಮೂಡುತ್ತಿದೆ.

3) ಮುಂಚೂಣಿ ಸಿಬ್ಬಂದಿಗಳಿಗೆ ಅರಣ್ಯ ಹತ್ತಿರದಲ್ಲಿ ವಸತಿ ಗೃಹಗಳನ್ನು ನಿರ್ಮಿಸಿರುವುದರಿಂದ ಅವರಿಗೆ ಹೆಚ್ಚಿನ ಮಾನಸಿಕ ಸ್ಥೈರ್ಯ ತುಂಬಿದಂತಾಗಿದೆ ಮತ್ತು ತುರ್ತು ಸಮಯದಲ್ಲಿ ಬೇಗ ಅರಣ್ಯವನ್ನು ತಲುಪಿ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವುದರಿಂದ ಆಗಬಹುದಾದಂತ ದೊಡ್ಡ ಅನಾಹುತಗಳನ್ನು ಕಡಿಮೆಗೊಳಿಸಲು ಸಾಧ್ಯವಾಗಿದೆ.

4) ರಕ್ಷಣಾ ಸಿಬ್ಬಂದಿಗಳಿಗೆ ನಿಸ್ತಂತು ಉಪಕರಣಗಳು ನೀಡಿರುವುದರಿಂದ ತುರ್ತಾಗಿ ಕಾರ್ಯಾನುಮುಖವಾಗಲು ಹಾಗೂ ಅರಣ್ಯ ಪ್ರಕರಣಗಳನ್ನು ಪತ್ತೆ ಹಚ್ಚಿ ತಡೆಗಟ್ಟಲು ಅನುಕೂಲವಾಗಿದೆ.

5) ಅರಣ್ಯ ಸರ್ವೆ ಮಾಡಿ ಬೌಂಡರಿ ಪಿಲ್ಲರ್‌ಗಳ ಅಳವಡಿಕೆಯಿಂದ ಅರಣ್ಯ ಒತ್ತುವರಿಯನ್ನು ತಡೆಗಟ್ಟಲು ಸಹಾಯವಾಗುತ್ತದೆ.

6) ಲಾಂಟಾನಾ ಗಿಡಗಳು ಬೇಸಿಗೆ ದಿನಗಳಲ್ಲಿ ಒಣಗಿ, ಅರಣ್ಯ ಬೆಂಕಿ ಹರಡಲಿಕ್ಕೆ ಪ್ರೋತ್ಸಾಹಿತ ಗಿಡವಾಗಿರುವುದರಿಂದ ಅದನ್ನು ಕಿತ್ತು ಹಾಕಿರುವುದರಿಂದ ಬೆಂಕಿ ಹರಡುವುದನ್ನು ನಿಲ್ಲಿಸಬಹುದು.

7) ವಿನಾಶದ ಅಂಚಿನಲ್ಲಿರುವ ಗಿಡ ಮರಗಳ ಮೇಲೆ ಪ್ರಭಾವ ಬೀರಿ ನಾಶ ಮಾಡುವಂತಹ ಗಿಡಗಳನ್ನು ಗುರುತಿಸಿ ಅವುಗಳನ್ನು ನಾಶಮಾಡಲು ಅನುಕೂಲವಾಗುತ್ತಿದೆ.

8) ರಾಜ್ಯದಲ್ಲಿರುವ ಕೆಲವು ಪವಿತ್ರ ಗಿಡ ಮರಗಳನ್ನು ಗುರುತಿಸಿ ಸಂರಕ್ಷಿಸಲು ಅನುಕೂಲವಾಗುತ್ತಿದೆ.

ಇ) ಕರ್ನಾಟಕ ರಾಜ್ಯದಲ್ಲಿ ಒಟ್ಟು 43,35,647 ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ. ಒಟ್ಟು ವಿಸ್ತೀರ್ಣದ ವಿವರ ಕೆಳಕಂಡಂತಿದೆ:

1	ಮೀಸಲು ಅರಣ್ಯ	29,66,837 ಹೆ.
2	ರಕ್ಷಿತ ಅರಣ್ಯ	3,54,007 ಹೆ.
3	ವರ್ಗೀಕರಿಸದ ಅರಣ್ಯ	1,002,491 ಹೆ.
4	ಗ್ರಾಮ ಅರಣ್ಯ	4,905 ಹೆ.
5	ಖಾಸಗಿ ಅರಣ್ಯ	5,407 ಹೆ.
	ಒಟ್ಟು	**43,35,647 ಹೆ.**

ಈ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ 18,342.65 ಹೆ. ಅರಣ್ಯ ಪ್ರದೇಶವಿರುತ್ತದೆ. ಸದರಿ ಅರಣ್ಯ ಪ್ರದೇಶದ ವರ್ಗೀಕರಣದ ವಿವರ ಕೆಳಗಿನಂತಿದೆ:

1	ನೋಟಿಫೈಡ್ ಫಾರೆಸ್ಟ್	15,489.40 ಹೆ.
2	ಸೆಕ್ಷನ್ 4 ಅರಣ್ಯ	592.59 ಹೆ.
3	ಸಿ ಅಂಡ್ ಡಿ ಕ್ಲಾಸ್	2,260.66 ಹೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಎನ್.ಡಿ.ಬಿ. 2, 3 ಮತ್ತು 4 ನೇ ಬ್ಲಾಕ್ ಹೆಚ್ಚು ಅರಣ್ಯ ಹೊಂದಿದ್ದು, ಅದರ ವಿಸ್ತೀರ್ಣ 12,074 ಹೆ. ಇರುತ್ತದೆ. ನಂದಿ ರಾಜ್ಯ ಅರಣ್ಯ 1143 ಹೆ. ಅರಣ್ಯ ಪ್ರದೇಶ ಹೊಂದಿದ್ದು, ಹರಿಸ್ಥಳ ಅರಣ್ಯ 1179 ಹೆ. ಅರಣ್ಯ ಪ್ರದೇಶವನ್ನು ಹೊಂದಿರುತ್ತವೆ.

ಊ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯ ಅರಣ್ಯದಲ್ಲಿ ಬೇವು, ದಿಂಡಿಗ, ಪಚಾರಿ, ಶ್ರೀಗಂಧ, ತೊರೆಮತ್ತಿ, ಜಾಲಾರಿ, ಹುಣಸೆ ಮರಗಳಿದ್ದು, ಇವು ಬೆಲೆ ಬಾಳುವ ಮರಗಳಾಗಿರುತ್ತವೆ. ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಜೀವ ವೈವಿದ್ಯತೆಯ ಗಣನೆಯಲ್ಲಿಯೂ ಕೂಡ ಮಹತ್ವದ ಮರಗಳಾಗಿವೆ.

ಈ ಮೇಲ್ಕಂಡ ಬೆಲೆಬಾಳುವ ಮರಗಳ ಅರಣ್ಯ ಪ್ರದೇಶಗಳ ಸಂರಕ್ಷಣೆಗಾಗಿ ಉಪ ವಲಯ ಅರಣ್ಯಾಧಿಕಾರಿ, ಅರಣ್ಯ ರಕ್ಷಕರು ಅರಣ್ಯ ವೀಕ್ಷಕರು ದಿನ ನಿತ್ಯ ಅರಣ್ಯ ಪ್ರದೇಶದ ಸುತ್ತಮುತ್ತ ಗಸ್ತು ತಿರುಗುತ್ತಾ ಅರಣ್ಯ ಪ್ರದೇಶದ ಸಂರಕ್ಷಣೆ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ.

ಋ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಒಟ್ಟು 253.63 ಹೆ. ಅರಣ್ಯ ಪ್ರದೇಶ ಒತ್ತುವರಿಯಾಗಿರುತ್ತದೆ. ಒತ್ತುವರಿ ಮಾಡಿರುವ 332 ಜನರ ವಿರುದ್ಧ ಅರಣ್ಯ ಕಾಯ್ದೆ ಅಡಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಸದರಿ ಅರಣ್ಯ ಒತ್ತುವರಿಗಳನ್ನು 1963 ರ ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ 64 (ಎ) ಪ್ರಕಾರ ತೆರವುಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ.

Annexure

Details of programme and amount spent under the Intensification of Forest Management Scheme during the last three years

(Rs.in lakhs)

Sr. No.	Item	Description of item	Amount Spent		
			2010-11	2011-12	2012-13
1	2	3	4	5	6
Existing Components					
I. Forest Fire Control & Management in Forest Areas					
1	Maintenance of Firelines.		38.396	94.866	97.643
2	Engaging Fire watchers		31.826	87.977	67.155
3	Awareness Generation	Creation of awareness among people living in and around forests @ Rs. 0.30 lakhs per division. (Nos)	0.000	5.903	4.948
II. Strengthening of Infrastructure for Forest Protection					
1	Buildings	Construction of Residential buildings for Frontline staff.	48.150	225.755	209.375
2	Vehicles	Purchase of vehicles	0.000	6.080	0.000
3	Wirelesssets	Purchase of walkie talkies (Digital Walkies)sets of improvement for communication (Nos)	0.000	0.000	0.999
III. Preparation of working plans/survey and demarcation					
1	Survey / inventory of unique vegetation and eco-systems	Carryin of field survey of Forest area.	34.981	0.000	0.000
2		Supply and Fixation of concrete boundary pillars all along Reserve Forest boundary where survey was completed @ Rs. 0.055 lakhs per pillar	0.000	40.000	64.580
IV. New Components					
1	Protection & Conservation of unique vegetation and eco-systems		14.758	5.500	0.000
2	Protection & Conservation of sacred Groves		7.000	0.000	0.000
3	Control and Eradication of Forest Invasive Species		12.999	4.949	10.712
	Grand Total		**188.110**	**471.030**	**455.412**